INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -5, September-October, 2025
Page No,86-92
Peer -Reviewed, Refereed Journal

# ಹೇಮಾವತಿ ಜಲಾಶಯ ಯೋಜನೆಯಿಂದ ಮುಳುಗಡೆಯಾದ ಐತಿಹಾಸಿಕ ಶೆಟ್ಟಿಹಳ್ಳಿ ಚರ್ಚ್– ಒಂದು ಅವಲೋಕನ

**ಪುರುಷೋತ್ತಮ ಹೆಚ್.ವಿ.**[1]

**ಸಾರಾಂಶ**

ಆಧುನಿಕ ಭಾರತದ 15 ಮತ್ತು 16ನೇ ಶತಮಾನದಲ್ಲಿ ಭಾರತಕ್ಕೆ ಯೂರೋಪಿಯನ್ನರ ಆಗಮನವಾಯಿತು. ಮೊದಲಿಗೆ ಪೋರ್ಚುಗೀಸರು, ಡಚ್ಚರು, ಬ್ರಿಟೀಷರು ಮತ್ತು ಫ್ರೆಂಚರು ಭಾರತವನ್ನು ಕ್ರಮವಾಗಿ ಪ್ರವೇಶಿಸಿದರು. ಇವರ ಮುಖ್ಯ ಉದ್ದೇಶ ಭಾರತದಲ್ಲಿ ವ್ಯಾಪಾರ ಮತ್ತು ವಾಣಿಜ್ಯವನ್ನು ಮಾಡುವುದು ಹಾಗೂ ಮತ ಪ್ರಚಾರ ಮಾಡುವ ಉದ್ದೇಶವನ್ನು ಹೊಂದಿದ್ದರು. ಮೊದಲಿಗೆ ಭಾರತಕ್ಕೆ ಆಗಮಿಸಿದ ಪೋರ್ಚುಗೀಸರು ಕರ್ನಾಟಕದ ಗಡಿ ರಾಜ್ಯವಾದ ಗೋವಾದಲ್ಲಿ ತಮ್ಮ ನೆಲೆಯನ್ನು ಹೊಂದಿ ನಂತರ ಕರ್ನಾಟಕದ ಕರಾವಳಿಯಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಭಾರತಕ್ಕೆ ಆಗಮಿಸಿದ ಕ್ರಿಶ್ಚಿಯನ್ ಮಿಷನರಿಗಳು ಧರ್ಮ ಪ್ರಚಾರವನ್ನು ನಡೆಸಿ ಹಲವಾರು ಹಿಂದೂಗಳನ್ನು ಮತಾಂತರಗೊಳಿಸಿದರು. ಹಾಸನ ಜಿಲ್ಲೆಯೂ ಕೂಡ ಕ್ರೈಸ್ತ ಧರ್ಮದ ಮತಾಂತರಕ್ಕೆ ಒಳಪಟ್ಟಿದ್ದು ಮಗ್ಗೆ, ಶೆಟ್ಟಿಹಳ್ಳಿ, ಗಾಡೇನಹಳ್ಳಿ, ಬೇಲೂರು ಅದರ ಸುತ್ತಮುತ್ತಲಿನ ಗ್ರಾಮಗಳಲ್ಲಿದ್ದ ಹಿಂದೂಗಳನ್ನು ಮತಾಂತರಗೊಳಿಸಿದರು.

**ಪೀಠಿಕೆ**

ಹಾಸನ ಜಿಲ್ಲೆ ವಿಶ್ವದ ಭೂಪಟದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ಸ್ಥಳವಾಗಿದ್ದು, ಇತಿಹಾಸ ಪರಂಪರೆಗೂ ಪ್ರಸಿದ್ಧವಾಗಿದೆ. ಹಾಸನ ಜಿಲ್ಲೆಯು ಕದಂಬರು, ಗಂಗರು, ಚಾಲುಕ್ಯರು, ಹೊಯ್ಸಳರು, ವಿಜಯನಗರ, ಅರಸರು, ಮೈಸೂರು ಒಡೆಯರು ಮತ್ತು ಐಗೂರು ಪಾಳೆಗಾರರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು.ಹಾಸನ ಜಿಲ್ಲೆಯ ವಿಶ್ವವಿಖ್ಯಾತವಾದ ಹೊಯ್ಸಳರ ದೇವಾಲಯಗಳಾದ ಬೇಲೂರು, ಹಳೇಬೀಡು, ಅರಸೀಕೆರೆ, ಜಾವಗಲ್, ಹಾರನಹಳ್ಳಿ, ನುಗ್ಗೇಹಳ್ಳಿ ದೇವಾಲಯಗಳು ಗಂಗರ ಕಾಲದಲ್ಲಿ ನಿರ್ಮಾಣವಾದ ಏಕಶಿಲಾ ವಿಗ್ರಹವಾದ ಶ್ರವಣಬೆಳಗೊಳದ ಬಾಹುಬಲಿ ವಿಗ್ರಹ ಚೋಳರ ಕಾಲದ ದೇವಾಲಯಗಳು, ಜಿನಬಸದಿಗಳು ಮೊದಲಾದವುಗಳಿಂದಾಗಿ ಹಾಸನ ಜಿಲ್ಲೆಯನ್ನು ಶಿಲ್ಪಕಲೆಗಳ ನಾಡು

**1.ಸಂಶೋಧಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಮೈಸೂರು.**

ಎಂಬುದಾಗಿ ಕರೆಯಲಾಗುತ್ತದೆ. ಹಾಸನ ಜಿಲ್ಲೆಯು ಭೌಗೋಳಿಕವಾಗಿ ಮಲೆನಾಡು ಪ್ರದೇಶ, ಅರೆಮಲೆನಾಡು ಪ್ರದೇಶ ಮತ್ತು ದಕ್ಷಿಣ ಒಳನಾಡು ಪ್ರದೇಶಗಳನ್ನು ಹೊಂದಿದೆ. ಮಲೆನಾಡು ಪ್ರದೇಶದಲ್ಲಿರುವ ಪಶ್ಚಿಮ ಘಟ್ಟಗಳಲ್ಲಿರುವ ದಟ್ಟ ಅರಣ್ಯ, ಒಳನಾಡು ಪ್ರದೇಶಗಳಲ್ಲಿ ಕಲ್ಪವೃಕ್ಷಗಳಿಂದ ಹಾಗೂ ಆಲೂಗಡ್ಡೆ, ಕಾಫಿ, ಏಲಕ್ಕಿ, ಮೆಣಸು ಮೊದಲಾದ ಬೆಳೆಗಳೊಂದಿಗೆ ಕಂಗೊಳಿಸುತ್ತಿರುವ ಹಾಸನ ಜಿಲ್ಲೆಯು ಪ್ರಕೃತಿ ಸೌಂದರ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಹಾಸನ ಜಿಲ್ಲೆಯಲ್ಲಿ ಹರಿಯುತ್ತಿರುವ ಕಾವೇರಿ, ಹೇಮಾವತಿ, ಯಗಚಿ, ವಾಟೆಹೊಳೆ, ಎತ್ತಿನಹೊಳೆ ಮೊದಲಾದ ನದಿಗಳನ್ನು ಕಾಣಬಹುದಾಗಿದೆ. ಹಾಸನ ಜಿಲ್ಲೆಯು ಹೊಂದಿರುವ ಹಿತಕರವಾದ ವಾತಾವರಣ, ಪ್ರಕೃತಿ ಸೌಂದರ್ಯ ಮೊದಲಾದವುಗಳಿಂದ ಹಾಸನ ಜಿಲ್ಲೆಯನ್ನು ಬಡವರ ಊಟಿ ಎಂದು ಕರೆಯಲಾಗುತ್ತದೆ. ಹಾಸನ ಜಿಲ್ಲೆಯು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಹಾಗು ಸಾಂಸ್ಕೃತಿಕವಾಗಿ, ತನ್ನದೇ ಆದ ಸ್ಥಾನವನ್ನು ಹೊಂದಿದ್ದು, ವಿವಿಧ ಜನಾಂಗ, ಭಾಷೆ, ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಹಾಗು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದೆ.

## ಹಾಸನ ಜಿಲ್ಲೆಗೆ ಕ್ರೈಸ್ತರ ಆಗಮನ

ಹಾಸನ ಜಿಲ್ಲೆಯನ್ನು ಮೈಸೂರು ಮಿಷನರಿಯ ಜೇಷ್ಠಪುತ್ರ ಎಂದು ಕರೆಯಲಾಗುತ್ತದೆ. ಸ್ವಾ॥ ಲಿಯೋನಾಡು ಚಿನ್ನಾಮಿ 1648ರಲ್ಲಿ ಕರಾವಳಿಯ ಹೊನ್ನಾವರದಿಂದ ಹೊರಟು ತಮಿಳುನಾಡಿನ ಮಧುರೆಗೆ ಕಾಲ್ನಡಿಗೆಯಲ್ಲಿ ತೆರಳುವಾಗ ಹಾಸನ ಜಿಲ್ಲೆಯ ಮಾರ್ಗವಾಗಿ ಪ್ರಯಾಣ ಮಾಡಿದರು. ಈ ಸಂದರ್ಭದಲ್ಲಿ ಇವರ ಧರ್ಮೋಪದೇಶದಿಂದ ಹಲವಾರು ಜನ ಮತಾಂತರ ಹೊಂದಿದರು. ಹಾಸನ ಜಿಲ್ಲೆಗೆ 17ನೇ ಶತಮಾನದ ಅಂತ್ಯದಲ್ಲಿ ಕ್ರೈಸ್ತ ಧರ್ಮ ಪ್ರವೇಶಿಸಿತು ಎಂದು ಫಾ.ಡಿ.ಫೆರೋಲಿರವರು ಜೆಸ್ಯೂಟ್ಸ್ ಇನ್ ಮೈಸೂರು ಎಂಬ ಕೃತಿಯಲ್ಲಿ ದಾಖಲಿಸಿರುತ್ತಾರೆ. 1699ರಲ್ಲಿ ಹಾಸನ ಮತ್ತು ಬೇಲೂರಿನಲ್ಲಿ ಕ್ರೈಸ್ತ ಮಿಷನರಿ ಪ್ರಾರಂಭವಾಗಿ ಅಲ್ಲಿದ್ದ ಸುಮಾರು 300 ಜನರನ್ನು ಮತಾಂತರಗೊಳಿಸಿದರು. ಹಾಸನದ ಗಾಡೇನಹಳ್ಳಿ, ಚನ್ನರಾಯಪಟ್ಟಣದಲ್ಲಿ 190 ಕ್ರೈಸ್ತರಿದ್ದರು. ಹಾಸನದ ಮಗ್ಗೆ, ಶೆಟ್ಟಿಹಳ್ಳಿಗೆ ಭೇಟಿ ನೀಡಿರುವುದಾಗಿ ಫೆರೋಲಿ ತಮ್ಮ ಕೃತಿಯಲ್ಲಿ ತಿಳಿಸಿರುತ್ತಾರೆ. 1704ರಲ್ಲಿ ಫಾದರ್ ಆಂಟೋನಿಯಾ ಮರಿಯಾ ಪ್ಲಟೇಲ್ ಎಸ್.ಜೆ. ರವರು ಹಾಸನ, ಬೇಲೂರು, ಗಾಡೇನಹಳ್ಳಿ ಕಡಗಳಲ್ಲಿ ಧರ್ಮ ಪ್ರಚಾರ ಕೈಗೊಂಡು ಅನೇಕರಿಗೆ ದೀಕ್ಷಾಸ್ನಾನ ನೀಡಿದರು. ಹಾಸನ ಜಿಲ್ಲೆಯ ಹಾಸನ, ಅಲ್ಫೋನ್ಸ್‌ನಗರ, ಅರೆಹಳ್ಳಿ, ಅರಸೀಕೆರೆ, ಬೇಲೂರು, ದಾಸಾಪುರ, ಫಾತಿಮಾಪುರ, ಗಾಡೇನಹಳ್ಳಿ, ಹೊಳೆನರಸೀಪುರ, ಜೋಸೆಫ್‌ನಗರ, ಮಗ್ಗೆ, ಮರಿಯಾನಗರ, ಮಠಸಾಗರ, ಸಕಲೇಶಪುರ, ಸುಂಡೇಕೆರೆ, ಶೆಟ್ಟಿಹಳ್ಳಿ, ಗಂಡಸಿ ಮೊದಾಲಾದ ಸ್ಥಳಗಳಲ್ಲಿ ಅಲ್ಲಲ್ಲಿ ಚದುರಿದಂತೆ ವಾಸಿಸುತ್ತಿದ್ದಾರೆ.

## ಶೆಟ್ಟಿಹಳ್ಳಿಯಲ್ಲಿ ಕ್ರೈಸ್ತ ಧರ್ಮದ ಉದಯ

ಶೆಟ್ಟಿಹಳ್ಳಿಯು ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನಲ್ಲಿದ್ದು ಹಾಸನದಿಂದ ಸುಮಾರು 20 ಕಿ.ಮೀ ದೂರದಲ್ಲಿದೆ. ಶೆಟ್ಟಿಹಳ್ಳಿಯ ಹೆಸರು 1727 ರಲ್ಲಿ ಜೆಜ್ವಿಟ್ಸ್ ದಾಖಲೆಗಳಲ್ಲಿ ಕಂಡುಬರುತ್ತದೆ. ಫಾದರ್, ಮ್ಯಾನುವೆಲ್ ರೆಬೆಲ್ಲೋ ರವರು ಶೆಟ್ಟಿಹಳ್ಳಿಗೆ ಆಗಾಗ್ಗೆ ಭೇಟಿ ನೀಡುತ್ತಿದ್ದ ದಾಖಲೆಗಳಿವೆ. ಫಾದರ್ ಮೆಂಡೆಂಜ್ ಶೆಟ್ಟಿಹಳ್ಳಿಯ ಸುತ್ತಮುತ್ತಲಿನ 190 ಜನರಿಗೆ ದೀಕ್ಷಾಸ್ನಾನ ನೀಡಿರುತ್ತಾರೆ. ಕರ್ನಾಟಕದ ಪ್ರಮುಖ ಐದು ಕ್ರೈಸ್ತ ಧರ್ಮ ಕೇಂದ್ರಗಳಾದ ಆನೇಕಲ್, ಹಾರೋಬಲೆ, ಶ್ರೀರಂಗಪಟ್ಟಣ, ಮಗ್ಗೆ ಮತ್ತು ಶೆಟ್ಟಿಹಳ್ಳಿಗಳಾಗಿದ್ದವು. 1750ರಲ್ಲಿ ಫಾದರ್ ಡಿ.ಅಜೆವೆಡೋ ರವರು ಶೆಟ್ಟಿಹಳ್ಳಿಯಲ್ಲಿ ತಂಗಿದ ದಾಖಲೆಗಳು ಸಿಗುತ್ತವೆ. 1796ರಲ್ಲಿ ಫಾದರ್ ಬನ್ನೇಟ್ರನ್ ರವರು ಶೆಟ್ಟಿಹಳ್ಳಿಯ ಜವಾಬ್ದಾರಿ ವಹಿಸಿದರೆಂದು ಎ ಲೀನೆ ರವರು ಬರೆದಿರುತ್ತಾರೆ. ಟಿಪ್ಪು ಸುಲ್ತಾನನ ಕಾಲದಲ್ಲಿ ಕ್ರೈಸ್ತರು ಹಲವಾರು ಚಿತ್ರಹಿಂಸೆಯನ್ನು ಅನುಭವಿಸಬೇಕಾಯಿತು. ಟಿಪ್ಪುವಿನ ನಂತರ ಮೈಸೂರು ಒಡೆಯರ ಕಾಲದಲ್ಲಿ ಫ್ರಾನ್ಸ್ ಪಾದ್ರಿ ಅಬ್ಬೆ ದೊಬೋಅ ಟಿಪ್ಪುವಿನ ಕಾಲದಲ್ಲಿ ಮುಸ್ಲಿಂ ಧರ್ಮಕ್ಕೆ ಬಲವಂತವಾಗಿ ಮತಾಂತರ ಹೊಂದಿದ ಕ್ರೈಸ್ತರನ್ನು ಕ್ರೈಸ್ತ ಧರ್ಮಕ್ಕೆ ಮರು ಮತಾಂತರಗೊಳಿಸಿದರು. ಇವರು ಮೈಸೂರು ಪ್ರಾಂತ್ಯದಲ್ಲಿ ಸಿಡುಬು ರೋಗಕ್ಕೆ ಮೊದಲು ಚುಚುಮದ್ದನ್ನು ನೀಡಿ ಸಾವಿರಾರು ಜನರನ್ನು ಈ ಪಿಡುಗಿನಿಂದ ಪಾರು ಮಾಡಿದರು. 3ನೇ ಕೃಷ್ಣರಾಜ ಒಡೆಯರ ಪತ್ನಿಯು ಸೇರಿದಂತೆ ಸುಮಾರು 25,432 ಜನರಿಗೆ ಸಿಡುಬು ರೋಗಕ್ಕೆ ದಾಕು ಹಾಕಿದರು. ಇಲ್ಲಿನ ಜನರು ಇವರನ್ನು ದೊಡ್ಡಸ್ವಾಮಿಯರು ಎಂದು ಕರೆಯುತ್ತಿದ್ದರು. ಶೆಟ್ಟಿಹಳ್ಳಿಯಲ್ಲಿ ಸೇವೆ ಮಾಡಿದ ಪ್ರಮುಖರಲ್ಲಿ ಫಾದರ್ ಸಿ ಡೆಸೆಂಟ್ ಪ್ರಮುಖರು. ಇವರು ಇಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಲ್ಲದೆ, ವೈದ್ಯಕೀಯವಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ. ಶೆಟ್ಟಿಹಳ್ಳಿಯಲ್ಲಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿ ಹಲವಾರು ಜನರನ್ನು ಪ್ಲೇಗ್ ರೋಗದಿಂದ ಮುಕ್ತಗೊಳಿಸಿದ ಕೀರ್ತಿಯು ಇವರಿಗೆ ಸಲ್ಲುತ್ತದೆ.

## ಶೆಟ್ಟಿಹಳ್ಳಿ ಚರ್ಚ್‌ನ ಪರಂಪರೆ ಮತ್ತು ಸಂಸ್ಕೃತಿ

ಹೇಮಾವತಿ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಿರುವ ಶೆಟ್ಟಿಹಳ್ಳಿಯ ಜಪಮಾಲೆ ರಾಣಿಯ ದೇವಾಲಯವು ಅಣೆಕಟ್ಟು ತುಂಬಿದಾಗ ಟೈಟಾನಿಕ್ ಹಡಗು ನೀರಿನಲ್ಲಿ ಮುಳುಗುತ್ತಿರುವಂತೆ ಭಾಸವಾಗುತ್ತದೆ. ಅಣೆಕಟ್ಟು ನೀರು ಖಾಲಿಯಾದಾಗ ಇತಿಹಾಸವನ್ನು ಸಾರುವ ಒಂದು ಐತಿಹಾಸಿಕ ಸ್ಮಾರಕವಾಗಿ ಗೋಚರಿಸುತ್ತಿದೆ. ಜಪಮಾಲೆ ರಾಣಿ ದೇವಾಲಯ ನಿರ್ಮಾಣದ ಇಸವಿಯ ಬಗ್ಗೆ ಮಾಹಿತಿಯ ಕೊರತೆ ಇದೆ. 1820ರ ವೇಳೆಗೆ ಫಾ.ಅಬ್ಬೆದುಬೋ ಆ ದೇವಾಲಯವನ್ನು ಕಟ್ಟಿಸಿದರೆಂದು ಊಹಿಸಲಾಗಿದೆ. ಮೈಸೂರಿನ ಅಂದಿನ ಬ್ರಿಟಿಷ್ ರೆಸಿಡೆಂಟ್‌ರಾಗಿದ್ದ ಎ.ಹೆಚ್ ಕೋಲ್‌ರವರಿಗೆ ಚರ್ಚ್‌ಗಳ ದುರಸ್ತಿಗೆ ಸಹಾಯ ಮಾಡುವಂತೆ ದಿನಾಂಕ:28–09–1819 ರಲ್ಲಿ ಪತ್ರ ಬರೆದಿರುತ್ತಾರೆ. ಎ.ಹೆಚ್

ಕೋಲ್‌ರವರು ರೂ.300ಗಳನ್ನು ಸಹಾಯಧನವಾಗಿ ನೀಡಿದ್ದು,ಇದಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳ ದಾಖಲೆಯನ್ನು ಕಳುಹಿಸಿರುತ್ತಾರೆ. ಸಹಾಯಧನ 1835ರಲ್ಲಿ ಫಾ.ಬಿಗಾಟ್ ಬ್ಲೂಕ್ಲಿಯರ್ ಇದಕ್ಕೆ ಎರಡು ಭಾಗಗಳನ್ನು ಸೇರಿಸಿ ದುರಸ್ತಿ ಮಾಡಿಸಿರುತ್ತಾರೆ. ಶೆಟ್ಟಿಹಳ್ಳಿ ಚರ್ಚ್ ಜರ್ಮನ್ ವಿನ್ಯಾಸದ ಫ್ರೆಂಚ್ ಶೈಲಿಯ ಕಟ್ಟಡವಾಗಿದ್ದು, ಒಳಾಂಗಣವು ಹಿಂದೂ ಶೈಲಿಯನ್ನು ಒಳಗೊಂಡಿದೆ. ಇದರಲ್ಲಿನ ಕಮಾನುಗಳು, ಕಂಬಗಳು ವಿಶೇಷವಾಗಿವೆ. ಗೋಪುರದಲ್ಲಿ ಶಿಲುಬೆಯ ಕಳಸ, ಹಿಂಬದಿಯಲ್ಲಿ ಎರಡು ಗಂಟಾಗೋಪುರಗಳನ್ನು ಕಾಣಬಹುದಾಗಿತ್ತು. ಈ ಕಟ್ಟಡವನ್ನು ಸಿಮೆಂಟ್ ಬಳಸದೆ ಕೋಳಿ ಮೊಟ್ಟೆಗಳನ್ನು ಅರೆದು, ಸುಣ್ಣವನ್ನು ಅದಕ್ಕೆ ಸೇರಿಸಿದ ಚುರ್ಕಿ ಗಾರೆಯಿಂದ ನಿರ್ಮಿಸಲಾಗಿದೆ.

## ಹಾಸನದ ಜೀವನಾಡಿ ಹೇಮಾವತಿ ನದಿ

ಹೇಮಾ ಅಂದರೆ ಚಿನ್ನ ಎಂದರ್ಥ ಇದನ್ನು ಕನ್ನಡದಲ್ಲಿ ಯನ್ನ ಹೊಳೆ ಎಂದು ಎಣ್ಣೆಯುಕ್ತ ನದಿ ಅಥವಾ ಹೊಳೆಯುವ ನದಿ ಎಂಬುದಾಗಿ ಕರೆಯುತ್ತಾರೆ. ಈ ನದಿಯು ಕಾವೇರಿ ನದಿಯ ಉಪನದಿಯಾಗಿದ್ದು, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಜಾವಳಿ ಎಂಬ ಭಾಗದಲ್ಲಿ ಉಗಮವಾಗುತ್ತದೆ. ಅಲ್ಲಿಂದ ಮುಂದೆ ದಕ್ಷಿಣಕ್ಕೆ ಹರಿದು ಸಕಲೇಶಪುರ ತಾಲ್ಲೂಕಿನ ಆಚನಹಳ್ಳಿ ಎಂಬಲ್ಲಿ ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ನಂತರ ಪೂರ್ವಕ್ಕೆ ಹರಿದು ಕೊಡಗು ಜಿಲ್ಲೆಯ ಸೋಮವಾರಪೇಟೆ ಸ್ವಲ್ಪ ಭಾಗವನವನ್ನು ಪ್ರವೇಶಿಸಿ ಮತ್ತೆ ಪುನ: ಹಾಸನ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಯಗಚಿ ನದಿಯು ಗೊರೂರು ಬಳಿ ಹೇಮಾವತಿಯೊಂದಿಗೆ ಸಂಗಮವಾಗುತ್ತದೆ. ನಂತರ ಪೂರ್ವದ ಹರಿದು ಹೊಳೇನರಸೀಪುರವನ್ನು ದಾಟಿ ಮುಂದೆ ದಕ್ಷಿಣದ ನಗರತ್ತಿ ಮುಖಾಂತರ ಕೃಷ್ಣರಾಜಪೇಟೆ ತಾಲ್ಲೂಕಿನ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಈ ನದಿ ಹಾಸನದಲ್ಲಿ 113 ಕಿ.ಮೀ ಉದ್ದ ಹರಿಯುತ್ತದೆ.

## ಹೇಮಾವತಿ ಜಲಾಶಯ ಯೋಜನೆ

ಹಾಸನ ಜಿಲ್ಲೆಯ ಸಮಗ್ರ ನೀರಾವರಿ ಅಭಿವೃದ್ಧಿಗಾಗಿ ಹೇಮಾವತಿ ಜಲಾಶಯ ಯೋಜನೆಯನ್ನು 1968ರಲ್ಲಿ ಕೈಗೆತ್ತಿಕೊಳ್ಳಲಾಯಿತು. ಹೇಮಾವತಿ ನದಿಗೆ ಹಾಸನ ಜಿಲ್ಲೆಯ ಹಾಸನ ತಾಲ್ಲೂಕಿನ ಗೊರೂರು ಬಳಿ ಅಣೆಕಟ್ಟನ್ನು ನೀರಾವರಿ ಉದ್ದೇಶಕ್ಕಾಗಿ 1980ರಲ್ಲಿ ಇದನ್ನು ಪೂರ್ಣಗೊಳಿಸಲಾಯಿತು. ಈ ಯೋಜನೆಗೆ ಸುಮಾರು 588 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಈ ಯೋಜನೆಯಿಂದ ಹಾಸನ ಜಿಲ್ಲೆ ಮಾತ್ರವಲ್ಲದೆ ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳಿಗೂ ಕೂಡ ಕೃಷಿ ಮತ್ತು ಕುಡಿಯುವ ನೀರಿಗಾಗಿ ನೀರನ್ನು ಒದಗಿಸಲಾಗುತ್ತದೆ. ಈ ನಾಲ್ಕು ಜಿಲ್ಲೆಗಳಿಂದ ಸುಮಾರು 2,65,064 ಹೆಕ್ಟೇರ್ ಭೂಮಿ ಅಂದರೆ 6,55,000 ಎಕರೆ ಭೂಮಿಗೆ ನೀರಾವರಿಯನ್ನು ಈ ಯೋಜನೆಯಿಂದ ಒದಗಿಸಲಾಗುತ್ತದೆ. ಈ ಅಣೆಕಟ್ಟು ನಿರ್ಮಾಣದಿಂದ ಲಕ್ಷಾಂತರ ಎಕರೆ ಭೂಮಿಗೆ ನೀರನ್ನು ಒದಗಿಸಿದರೂ

ಸಹ ಸಾವಿರಾರು ಎಕರೆ ಭೂಮಿ ಮುಳುಗಡೆ ಹೊಂದಿ ಬಹಳಷ್ಟು ಕುಟುಂಬಗಳು ನಿರಾಶ್ರಿತರಾಗಿರುವುದನ್ನು ಗಮನಿಸಬಹುದು.

ಹೇಮಾವತಿ ಜಲಾಶಯ ಯೋಜನೆಗೆ ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಿಂದ 68 ಗ್ರಾಮಗಳು, ಸಕಲೇಶಪುರ ತಾಲ್ಲೂಕಿನಿಂದ 30 ಗ್ರಾಮಗಳು, ಅರಕಲಗೂಡು ತಾಲ್ಲೂಕಿನಿಂದ 27 ಗ್ರಾಮಗಳು, ಮತ್ತು ಹಾಸನ ತಾಲ್ಲೂಕಿನಿಂದ 22 ಗ್ರಾಮಗಳು,ಹಾಗೂ ಮಡಿಕೇರಿಯ ಸೋಮವಾರಪೇಟೆ ತಾಲ್ಲೂಕಿನಿಂದ 25 ಗ್ರಾಮಗಳು ಒಟ್ಟು 172 ಹಳ್ಳಿಗಳು ಮುಳುಗಡೆಯನ್ನು ಹೊಂದಿವೆ. ಇದರಲ್ಲಿ 46 ಹಳ್ಳಿಗಳು ಪೂರ್ಣ ಮುಳುಗಡೆಯಾಗಿವೆ. ಅಂದರೆ ಕೃಷಿ ಭೂಮಿ ಮತ್ತು ವಾಸಯೋಗ್ಯ ಮನೆಗಳನ್ನು ಸಹ ಒಳಗೊಂಡಿದೆ. ಇನ್ನುಳಿದ ಸುಮಾರು 126 ಹಳ್ಳಿಗಳು ಭಾಗಶಃ ಮುಳುಗಡೆ ಹೊಂದಿವೆ. ಅಂದರೆ ಕೆಲವು ಗ್ರಾಮಗಳಲ್ಲಿ ಕೃಷಿ ಭೂಮಿ ಮುಳುಗಡೆ ಹೊಂದಿದ್ದರೆ ಕೆಲವು ಗ್ರಾಮಗಳಲ್ಲಿ ವಾಸಯೋಗ್ಯ ಮನೆಗಳು ಮುಳುಗಡೆ ಹೊಂದಿರುವುದನ್ನು ಗಮನಿಸಬಹುದಾಗಿದೆ. ಈ ಹೇಮಾವತಿ ಯೋಜನೆಗೆ ಒಟ್ಟು 21,008 ಎಕರೆ ಅಥವಾ 8502 ಹೆಕ್ಟೇರ್ ಭೂಮಿ ಮುಳುಗಡೆ ಹೊಂದಿದೆ. ಇದರಲ್ಲಿ ಒಣ ಅಥವಾ ಖುಷ್ಕಿ ಭೂಮಿಯು 13,000 ಎಕರೆಯನ್ನು ಹೊಂದಿದ್ದು ತೇವಾ ಅಥವಾ ತರಿ ಭೂಮಿಯು 3000 ಎಕರೆ ಭೂಮಿಯನ್ನು ಒಳಗೊಂಡಿದೆ. 5008 ಎಕರೆ ಖರಾಬು ಅಥವಾ ಸರ್ಕಾರಿ ಭೂಮಿಯನ್ನು ಒಳಗೊಂಡಿದೆ. ಈ ಹೇಮಾವತಿ ಜಲಾಶಯ ಯೋಜನೆಯಿಂದ 172 ಹಳ್ಳಿಗಳ ಸುಮಾರು 2283 ಕುಟುಂಬಗಳು ನಿರಾಶ್ರಿತರಾಗಿರುವುದನ್ನು ಗಮನಿಸಬಹುದಾಗಿದೆ.

## ಹೇಮಾವತಿ ಯೋಜನೆಯಿಂದ ಮುಳುಗಡೆಯಾದ ಕ್ರೈಸ್ತರ ನೆಲೆಗಳು

ಕ್ರಿ.ಶ.1976ರಲ್ಲಿ ಹೇಮಾವತಿ ಜಲಾಶಯ ಯೋಜನೆಯಿಂದ ಶೆಟ್ಟಿಹಳ್ಳಿಯ ಸುತ್ತಮುತ್ತಲಿನ ಗ್ರಾಮಗಳು ಸಂಪೂರ್ಣ ಮತ್ತು ಭಾಗಶಃವಾಗಿ ಮುಳುಗಡೆಯಾಗಿವೆ. ಮುಳುಗಡೆಯಾದ ಕ್ರೈಸ್ತ ನೆಲೆಗಳಲ್ಲಿ ಶೆಟ್ಟಿಹಳ್ಳಿ ಅಥವಾ ಮಠದ ಕೊಪ್ಪಲು, ಊರ ಮುಂದಿನ ಹೊಸಹಳ್ಳಿ, ನರಸಯ್ಯನ ಕೊಪ್ಪಲು, ಮುದ್ದೇಗೌಡನ ಕೊಪ್ಪಲು, ಚಂಗರವಳ್ಳಿ, ದೊಡ್ಡಕೊಪ್ಪಲು, ಅರೇಬಲೆಕೊಪ್ಪಲು, ಸುಳಗೋಡು, ಗದ್ದೆಕೊಪ್ಪಲು ಪ್ರಮುಖವಾಗಿವೆ. ಹೇಮಾವತಿಯಿಂದ ಮನೆಗಳು ಮತ್ತು ಭೂಮಿ ಮುಳುಗಡೆ ಆಗುವುದರ ಜೊತೆಗೆ ಇತಿಹಾಸ ಪ್ರಸಿದ್ಧವಾದ ಜಪಮಾಲೆ ರಾಣಿಯ ಶೆಟ್ಟಿಹಳ್ಳಿ ಚರ್ಚು, ಮೈಸೂರು ಸಂಸ್ಥಾನದಲ್ಲೇ ಮೊದಲಿಗೆ ಸ್ಥಾಪನೆಯಾದ ಆಸ್ಪತ್ರೆ ಹಾಗೂ ಹಾಸನ ಜಿಲ್ಲೆಗೆ ಮೊದಲು ಸ್ಥಾಪನೆಯಾದ ಸಂತಮೇರಿಯ ಶಾಲೆ ಮತ್ತು ಅನಾಥಾಶ್ರಮ ಹಾಗೂ ಕ್ರೈಸ್ತರ ಸ್ಮಶಾನವು ಕೂಡ ಮುಳುಗಡೆಯಾಗಿರುತ್ತವೆ.

## ಮುಳುಗಡೆಯಾದ ಕ್ರೈಸ್ತರಿಗೆ ನೀಡಿದ ಪುನರ್ವಸತಿ ಸ್ಥಳಗಳು

ಹೇಮಾವತಿ ಜಲಾಶಯ ಯೋಜನೆಯಿಂದ ಮುಳುಗಡೆಗೊಂಡ ಕ್ರೈಸ್ತ ಧರ್ಮೀಯ ನಿರಾಶ್ರಿತರಿಗೆ ಹಾಸನ ಜಿಲ್ಲೆಯ ವಿವಿಧ ತಾಲ್ಲೂಕು, ಶಿವಮೊಗ್ಗ ಮತ್ತು ಮೈಸೂರು ಜಿಲ್ಲೆಯ ಹೆಚ್ ಡಿ ಕೋಟೆಯ

ನಾಗನಹಳ್ಳಿಗಳಲ್ಲಿ ಪುನರ್ವಸತಿಯನ್ನು ಕಲ್ಪಿಸಲಾಗಿರುತ್ತದೆ. ಆಲೂರು ತಾಲ್ಲೂಕಿನ ಕುಪ್ಪೆ ಕಾಲೋನಿ ಅಥವಾ ಜೋಸೆಫ್ ನಗರಕ್ಕೆ ಉರಮುಂದಿನ ಹೊಸಹಳ್ಳಿ, ನರಸಯ್ಯನಕೊಪ್ಪಲು, ಚಂಗರವಳ್ಳಿ, ಸುಳಗೋಡು ಗ್ರಾಮಸ್ಥರನ್ನು, ಅರಕಲಗೂಡು ತಾಲ್ಲೂಕಿನ ಬೆಳ್ಳಾಮೆಯ ಮರಿಯಾನಗರಕ್ಕೆ ನರಸಯ್ಯನಕೊಪ್ಪಲು, ಮುದ್ದೇಗೌಡನಕೊಪ್ಪಲು, ದೊಡ್ಡಕೊಪ್ಪಲು, ಮಠದಕೊಪ್ಪಲು, ಸುಳಗೋಡು ಗ್ರಾಮಸ್ಥರನ್ನು, ಚನ್ನರಾಯಪಟ್ಟಣದ ಶ್ರೀನಿವಾಸಪುರದ ಆಲ್ಫೋನ್ಸ್ ನಗರಕ್ಕೆ ನರಸಯ್ಯನಕೊಪ್ಪಲು, ಮುದ್ದೇಗೌಡನಕೊಪ್ಪಲು, ದೊಡ್ಡಕೊಪ್ಪಲು, ಅರೇಬಲೆಕೊಪ್ಪಲು, ಮಠದ ಕೊಪ್ಪಲು ಗ್ರಾಮಸ್ಥರನ್ನು, ಗನ್ನಿಕಡದ ಜಯನಗರಕ್ಕೆ ಚಂಗರವಳ್ಳಿ ಗ್ರಾಮಸ್ಥರನ್ನು ಹೆಚ್.ಡಿ.ಕೋಟೆಯ ನಾಗನಹಳ್ಳಿಗೆ ಊರ ಮುಂದಿನ ಹೊಸಹಳ್ಳಿ, ನರಸಯ್ಯನಕೊಪ್ಪಲು, ಚಂಗರವಳ್ಳಿ ಗ್ರಾಮಸ್ಥರನ್ನು, ಶಿವಮೊಗ್ಗಕ್ಕೆ ಚಂಗರವಳ್ಳಿ ಗ್ರಾಮಸ್ಥರನ್ನು, ಹಾಸನಕ್ಕೆ ಶೆಟ್ಟಿಹಳ್ಳಿ ಗ್ರಾಮದ ನಿರಾಶ್ರಿತರಿಗೆ ಪುನರ್ವಸತಿಯನ್ನು ಕಲ್ಪಿಸಲಾಗಿರುತ್ತದೆ.

ಶೆಟ್ಟಿಹಳ್ಳಿಯ ಜಪಮಾಲೆ ರಾಣಿ ದೇವಾಲಯವು ಇಂದು ಹಲವಾರು ಮರದ ರಂಬೆಗಳಾಗಿ ಜೋಸೆಫ್ ನಗರದ ಸಂತ ಜೋಸೆಫ್‌ರ ದೇವಾಲಯ, ಮರಿಯಾನಗರದ ಸಂತ ಮರಿಯಮ್ಮನವರ ದೇವಾಲಯ,ಆಲ್ಫೋನ್ಸ್ ನಗರದ ಸಂತ ಆಲ್ಫೋನ್ಸ್ ದಿ ಲಿಗೋರಿ ದೇವಾಲಯ, ಜ್ಯೋತಿನಗರ, ಜಯನಗರ, ಮೊದಲಾದ ಕಡೆ ಹರಡಿಕೊಂಡಿವೆ. ಇದರ ಬೇರುಗಳು ಶೆಟ್ಟಿಹಳ್ಳಿಯೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿವೆ.ಶೆಟ್ಟಿಹಳ್ಳಿಯಲ್ಲಿ ವರ್ಷಕ್ಕೊಮ್ಮೆ ನಡೆಯುವ ಪೂಜೆಗಳು, ಕಟ್ಟಾಯ ಬೆಟ್ಟದ ಹಬ್ಬ ಮೊದಲಾದವುಗಳು ಚದುರಿ ಹೋಗಿರುವ ಕ್ರೈಸ್ತರನ್ನು ಭಾವನಾತ್ಮಕವಾಗಿ ಬೆಸೆಯುವ ಆಚರಣೆಗಳಾಗಿವೆ.

ಒಟ್ಟಾರೆ ಹಾಸನ ಜಿಲ್ಲೆಯಲ್ಲಿ ವಿವಿಧ ಧರ್ಮದವರು ವಾಸಿಸುತ್ತಿದ್ದಾರೆ ಅವರುಗಳಲ್ಲಿ ಹಿಂದೂಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು,ಸಿಖ್ಖರು,ಜೈನರು, ಬೌದ್ಧರು ಪ್ರಮುಖವಾಗಿವೆ. ಹಾಸನ ಜಿಲ್ಲೆಯಲ್ಲಿ ಹಲವಾರು ಧರ್ಮಗಳಿದ್ದರೂ ಕೂಡ ಇಲ್ಲಿಯ ಜನರು ಶಾಂತಿಪ್ರಿಯರಾಗಿದ್ದು, ಎಲ್ಲ ಧರ್ಮದವರೊಂದಿಗೆ ಸೌಹಾರ್ಧಯುತವಾಗಿ ಜೀವನ ನಡೆಸುತ್ತಿದ್ದಾರೆ. ಹೇಮಾವತಿ ಜಲಾಶಯಕ್ಕೆ ಮುಂಚೆ ಒಂದಡೆ ಕೇಂದ್ರಿಕೃತವಾಗಿದ್ದ ಕ್ರಿಶ್ಚಿಯನ್ನು ಪ್ರಸ್ತುತ ಹಾಸನ ಜಿಲ್ಲೆಯ ಎಲ್ಲೆಡೆ ಚದುರಿದಂತೆ ವಾಸಿಸುತ್ತಿದ್ದಾರೆ. ಇಲ್ಲಿನ ಕ್ರಿಶ್ಚಿಯನ್ ಧರ್ಮಿಯರು ಪ್ರಮುಖವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು, ಶಿಕ್ಷಣ ಕ್ಷೇತ್ರಕ್ಕೆ ಅಮೋಘವಾದ ಕೊಡುಗೆಯನ್ನು ನೀಡುತ್ತಿದ್ದಾರೆ ಎಂದು ಹೇಳಬಹುದು.

**ಅಡಿಟಿಪ್ಪಣಿಗಳು**

1. ಡಾ.ಬಿ.ಎಸ್.ತಲವಾಡಿ, ಸುವರ್ಣ ಸಂಪುಟ 1963–2013 ಚಿಕ್ಕಮಗಳೂರು ಧರ್ಮ ಕ್ಷೇತ್ರದ ಸಮಗ್ರ ಸಂಕ್ಷಿಪ್ತ ಚರಿತ್ರೆ. ಅಮರವಾಣಿ ಪ್ರಕಾಶನ, 2013. ಪುಟ ಸಂಖ್ಯೆ 189, 138, 148, 179.

2. ಫಾ.ವಲೇರಿಯನ್ ಕಾಸ್ಟೊಲಿನೋ ಸ್ನೇಹಜ್ಯೋತಿ ಸಂಚಿಕೆ ಸಂಪುಟ 12 ಡಿಸೆಂಬರ್ 2013, ಪುಟ ಸಂಖ್ಯೆ 32 ರಿಂದ 35.

3 ಅಂತರ್ಜಾಲ ಮಾಹಿತಿ ಮತ್ತು ವಿಕಿಪೀಡಿಯ

4. The Hindu, 19th Century church: Gothip fantasy Date 31-01-2019

5. Times of India, Do you Know about Karnataka's abandoned floating church date 01-08-2018

6. ಹೇಮಾವತಿ ಭೂಸ್ವಾಧೀನ ಮತ್ತು ಪುನರ್ವಸತಿ ಇಲಾಖೆ, ಹಾಸನ ರವರಿಂದ ಮಾಹಿತಿ ಸಂಗ್ರಹ

7. ಫಾ.ಪ್ಯಾಟ್ರಿಕ್ ಜೋನಸ್ ರಾವ್ ರವರೊಂದಿಗಿನ ಸಂದರ್ಶನ.

8. Decaan Hearld, The Glimple of Steeple date 31-10-2024